# **<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ಚಿಕ್ಕಮಗಳೂರು</u>**

## **<u>Spl.C No: 1/2016</u>**

<u>ಪ್ರಾ.ಸಾ.-27</u>
<u>ಚಾ.ಸಾ.-54</u>

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಸುಬ್ಬಣ್ಣ ಮಲ್ಲಪ್ಪ ಜಮಖಂಡಿ |
| ತಂದೆಯ ಹೆಸರು | ಃ | ಮಲ್ಲಪ್ಪ ಜಮಖಂಡಿ |
| ವಯಸ್ಸು | ಃ | 46 ವರ್ಷ |
| ಉದ್ಯೋಗ | ಃ | ತಹಸಿಲ್ದಾರ್, ಬೀದರ್ |
| ವಾಸ ಸ್ಥಳ | ಃ | ಬೀದರ್ |

**<u>ದಿನಾಂಕಃ 06-07-2019</u>**

**<u>ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಃ ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಪಿ.ಪಿ. ಯವರಿಂದಃ</u>**

1. ದಿನಾಂಕಃ 04-03-2014 ರಿಂದ ನವಂಬರ್ 2014 ರವರೆಗೆ ಗುಲ್ಬರ್ಗದಲ್ಲಿ ತಹಸಿಲ್ದಾರ್ ಆಗಿ ಕಾರ್ಯ ನಿರ್ವಹಿಸಿದ್ದೇನೆ.

2. ದಿನಾಂಕಃ 10-03-2014 ರಂದು ಲೋಕಾಯುಕ್ತ ಕಛೇರಿಯಿಂದ ನನಗೆ ಪತ್ರ ಬಂದಿದ್ದು, ಗುಲ್ಬರ್ಗ ತಾಲ್ಲೂಕಿನಲ್ಲಿ 2005-06 ರಿಂದ 2012-13 ರವರೆಗೆ ಬರಗಾಲ ಪೀಡಿತವೆಂದು ಘೋಷಣೆ ಮಾಡಿದ ಬಗ್ಗೆ ದಾಖಲೆ ಕೊಡುವಂತೆ ಕೇಳಿಕೊಂಡಿದ್ದರು. ನಾನು ದಾಖಲೆಗಳನ್ನು ಪರಿಶೀಲಿಸಿ, 2008-09 ರಲ್ಲಿ ಗುಲ್ಬರ್ಗ ತಾಲ್ಲೂಕು ಬರಗಾಲ ಪೀಡಿತ ತಾಲ್ಲೂಕು ಎಂದು ಘೋಷಣೆಯಾಗಿದ್ದು, ಆ ಬಗ್ಗೆ ಲಭ್ಯವಿದ್ದ ದಾಖಲೆಯನ್ನು ಪತ್ರ

ಮುಖೇನ ಲೋಕಾಯುಕ್ತ ಕಛೇರಿ, ಚಿಕ್ಕಮಗಳೂರಿಗೆ ಕಳುಹಿಸಿಕೊಟ್ಟೆ. ಸದರಿ ಪತ್ರವನ್ನು ಹಾಗೂ ಸರ್ಕಾರಿ ಆದೇಶವನ್ನು ನೋಡಿದಲ್ಲಿ ಗುರುತಿಸುತ್ತೇನೆ. ಅವುಗಳನ್ನು ಈಗ ನೋಡುತ್ತಿದ್ದು, ನಾನು ಲೋಕಾಯುಕ್ತ ಪೊಲೀಸರಿಗೆ ಬರೆದ ಪತ್ರವನ್ನು ನಿ.ಪಿ. 71 ಎಂದು ಗುರುತಿಸಲಾಯಿತು, ಅದರಲ್ಲಿರುವ ಸಾಕ್ಷಿಯ ಸಹಿಗೆ ನಿ.ಪಿ. 71(ಎ) ಎಂದು ಗುರುತಿಸಲಾಯಿತು. ಈ ಬಗ್ಗೆ ಕರ್ನಾಟಕ ಸರ್ಕಾರದ ನಡಾವಳಿಗಳ ನಕಲು ಮತ್ತು ಅನುಬಂಧಗಳನ್ನು ನೋಡುತ್ತಿದ್ದು, ಅವುಗಳಿಗೆ ಒಟ್ಟಿಗೆ ನಿ.ಪಿ. 72 ಎಂದು ಗುರುತಿಸಲಾಯಿತು (ಅವುಗಳು ಒಟ್ಟು 4 ಪುಟಗಳಲ್ಲಿದ್ದು, ಪುಟ ಸಂ.581 ರಿಂದ 586 ರವರೆಗೆ ಇದೆ.)

**<u>ಪಾಟೀ ಸವಾಲುಃ ಆರೋಪಿ ಪರ ಃ ಶ್ರೀ ಕೆ.ಎಸ್.ಎಸ್.ಪಿ. ವಕೀಲರಿಂದಃ</u>**

3. 2008-09 ರಲ್ಲಿ ಬರಗಾಲ ಪೀಡಿತ ಪ್ರದೇಶವೆಂದು ಘೋಷಣೆಯಾದ ಬಗ್ಗೆ ಮಾತ್ರ ನಾನು ದಾಖಲೆಯನ್ನು ಕೊಟ್ಟಿದ್ದೇನೆ. ಕೇಂದ್ರ ಸರ್ಕಾರದ ನಿಯಮಗಳಂತೆ 4 ವಾರಗಳ ಕಾಲ ಮಳೆ ಬರದೇ ಇದ್ದಲ್ಲಿ ಆ ಪ್ರದೇಶವನ್ನು ಬರಗಾಲ ಪೀಡಿತ ಪ್ರದೇಶ ಎಂದು ಕರೆಯುತ್ತಾರೆ. ಆ ನಂತರ ಮಳೆ ಬಂದರೂ ಸಹಿತವಾಗಿ ಆ ಪ್ರದೇಶವನ್ನು ಬರಗಾಲ ಪೀಡಿತ ಪ್ರದೇಶ ಎಂದು ಕರೆಯುತ್ತಾರೆ. ಗುಲ್ಬರ್ಗ ಜಿಲ್ಲೆಯಲ್ಲಿ ಹಿಂಗಾರಿ ಬೆಳೆಯಾಗಿ ತೊಗರಿ ಮತ್ತು ವಾಣಿಜ್ಯ ಬೆಳೆಯನ್ನು ಬೆಳೆಯುತ್ತಾರೆ. ಕೇಂದ್ರ ಸರ್ಕಾರದ ಮಾರ್ಗಸೂಚಿ ಪ್ರಕಾರ ಮುಂಗಾರು ಮಳೆ 4 ವಾರಗಳ ಕಾಲ ಬರದೇ ಇರುವುದನ್ನು ಪರಿಗಣಿಸಿದ್ದಾರೆ.

4. ಒಂದು ತಾಲ್ಲೂಕಿನಲ್ಲಿ ಕೆಲವು ಹೋಬಳಿಗಳಲ್ಲಿ ಮಳೆ ಬರದಿದ್ದಾಗ ತಾಲ್ಲೂಕಿನ ಎಲ್ಲಾ ಪ್ರದೇಶವನ್ನು ಬರಗಾಲ ಪ್ರದೇಶ ಎಂದು ಘೋಷಿಸುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ಮರು ವಿಚಾರಣೆ ಇಲ್ಲ.
(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

**ಓ.ಹೇ.ಕೇ.ಸ.ಇ.ಎ.ಒ.**

Sd/-06-07-2019

**(ಉಮೇಶ ಎಂ. ಅಡಿಗ)**
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಚಿಕ್ಕಮಗಳೂರು.**

*crc*